# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**Misc No. : 09/2025**

**PW 2**

**ದಿನಾಂಕ 18-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***Since, witness has not aware of Kannada language and court is not aware Telugu language of witness, Sri. Srinath Advocate of Chikkaballapur having KAR No.2201/2022 is appointed as a translator to translate from Kannada to Telugu and vice-versa.***

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ವಕೀಲರು ಮುಂದುವೆರದ ಮುಖ್ಯ ವಿಚಾರಣೆ ಏನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ .**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ. ಆರ್ ಎನ್ ಎಮ್ ರವರಿಂದಃ**

ನನ್ನ ಊರು ಕಮ್ಮವಾರಿ ಪಲ್ಲಿ. ನಾನು ಚಿಕ್ಕಂದಿನಿಂದಲೂ ಅದೇ ಗ್ರಾಮದಲ್ಲಿ ವಾಸವಾಗಿರುತ್ತೇನೆ. ಅರ್ಜಿದಾರರ ತಂದೆ ಚಿಕ್ಕ ಮದ್ದಿರೆಡ್ಡಿ ಯನ್ನು ನಾನು ನೋಡಿರುತ್ತೇನೆ. ಸದರಿ ಚಿಕ್ಕಮದ್ದಿರೆಡ್ಡಿ ರವರ ಮೊದಲನೇ ಹೆಂಡತಿ ವೆಂಕಟರವಣಮ್ಮ ಎಂದರೆ ಸರಿಯಲ್ಲ, ಸಾಕ್ಷಿಯು ಸ್ವತಃ ನುಡಿಯುತ್ತಾರೆ, ಗೌರಮ್ಮ 1 ನೇ ಹೆಂಡತಿ ಹಾಗೂ ವೆಂಕಟರವಣಮ್ಮ 2 ನೇ ಹೆಂಡತಿ. ಸದರಿ ವೆಂಕಟರವಣಮ್ಮನವರಿಗೆ ನಾಲ್ಕು ಜನ ಮಕ್ಕಳು. ಗೌರಮ್ಮನವರಿಗೆ ಮಕ್ಕಳು ಇರುವುದಿಲ್ಲ. ಗೌರಮ್ಮನವರನ್ನು ಆಕೆಯ ಜೀವಿತಾವದಿಯಲ್ಲಿ ಅರ್ಜಿದಾರರು ಪಾಲನೆ ಪೋಷಣೆ ಮಾಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳಾಗಿ ಕಾಣಿಸಿರುತ್ತೇನೆ ಎಂದರೆ ಸರಿಯಲ್ಲ.

2. ಎದುರುದಾರ ಬೈಯ್ಯರೆಡ್ಡಿ ಪ್ರಾಸಾ-1 ರವರ ಅಕ್ಕ ಭಾಗ್ಯಮ್ಮನವರನ್ನು ಮದುವೆ ಮಾಡಿಕೊಂಡಿರುತ್ತಾರೆ. ಎದುರುದಾರ ಬೈಯ್ಯ ರೆಡ್ಡಿ ಶೆಡ್ಯೂಲ್ ಸ್ವತ್ತಿನ ಸ್ವಾದೀನಾನುಭವದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅರ್ಜಿದಾರರು ಹಾಗುಾ ಎದುರುದಾರ ಸಹ ಸ್ವಾದೀನದಲ್ಲಿರುತ್ತಾರೆ ಎಂದು ನುಡಿದಿರುತ್ತಾರೆ. ಬೈಯ್ಯರೆಡ್ಡಿ ವಿಲ್ ಅನ್ನು ಸೃಷ್ಟಿಸಿ , ಪ್ರಬೇಟ್ ಅನ್ನು ಪಡೆದು ಅಕ್ರಮವಾಗಿ ಶೆಡ್ಯೂಲ್ ಸ್ವತ್ತನ್ನು ಸ್ವಾ ದೀನ ಹೊಂದಿದ್ದಾರೆ ಎಂದು ಸುಳ್ಳು ಹೇಳಿದೇನೆ

ಎಂದರೆ ಸರಿಯಲ್ಲ. ಎದುರುದಾರರಿಗೆ ತೊಂದರೆ ನೀಡುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**

**Misc No. : 09/2025**

**PW 1**

**ದಿನಾಂಕ 18-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

***Since, witness has not aware of Kannada language and court is not aware Telugu language of witness, Sri. Srinath Advocate of Chikkaballapur having KAR No.2201/2022 is appointed as a translator to translate from Kannada to Telugu and vice-versa.***

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ವಕೀಲರು ಮುಂದುವೆರದ ಮುಖ್ಯ ವಿಚಾರಣೆ ಏನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ .**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ. ಆರ್ ಎನ್ ಎಮ್ ರವರಿಂದಃ**

ನನ್ನ ತಂದೆ ಹೆಸರು ಚಿಕ್ಕ ಮದ್ದನರೆಡ್ಡಿ. ನನ್ನ ತಂದೆಗೆ ಗೌರಮ್ಮ ಮತ್ತು ವೆಂಕಟರವಣಮ್ಮ ಎಂಬ ಇಬ್ಬರು ಹೆಂಡತಿಯರು. ನನ್ನ ತಾಯಿ ವೆಂಕಟರವಣಮ್ಮ ನನ್ನ ತಂದೆಗೆ ಎರಡನೇ ಹೆಂಡತಿ. ನನ್ನ ತಾಯಿಗೆ, ನಾನು, ಭಾಗ್ಯಮ್ಮ, ಶಿಲ್ಪ ಮತ್ತು ಸುಧರಾಣಿ ರವರು ಮಕ್ಕಳು. ನನ್ನ ದೊಡ್ಡಮ್ಮ ಗೌರಮ್ಮ ತೀರಿಕೊಳ್ಳುವ ಕಾಲಕ್ಕೆ ನನಗೆ ಸುಮಾರು 15 ವರ್ಷ ವಯಸ್ಸಾಗಿತ್ತು. ಭಾಗ್ಯಮ್ಮ ನನ್ನ ಅಕ್ಕ, ಶಿಲ್ಪ ಮತ್ತು ಸುಧರಾಣಿ ರವರು ನನ್ನ ತಂಗಿಯರು.

2. ನನ್ನ ದೊಡ್ಡಮ್ಮ ಗೌರಮ್ಮನಿಗೆ ಶೆಡ್ಯೂಲ್ ಆಸ್ತಿಯು ತನ್ನ ತಂದೆ ಕಡೆಯಿಂದ ಬಂದಿರುತ್ತದೆ. ಸದರಿ ಗೌರಮ್ಮನವರಿಗೆ ಮಕ್ಕಳು ಇರುವುದಿಲ್ಲ. ಶೆಡ್ಯೂಲ್ ಆಸ್ತಿಯ ಸರ್ವೇ ನಂಬರ್ ನನ್ನಿಂದ ಹೇಳಲಾಗುವುದಿಲ್ಲ. ಶೆಡ್ಯೂಲ್ ಆಸ್ತಿಯು ನನ್ನ ತಾತನ ಆಸ್ತಿಯಾಗಿರುತ್ತದೆ. ದಿನಾಂಕ 01-05-1978 ರ ಕ್ರಯ ಪತ್ರದ ಮೂಲಕ ಗೌರಮ್ಮನವರು ಶೆಡ್ಯೂಲ್ ಆಸ್ತಿಯನ್ನು ರವೀಂದ್ರ ನಾಥ ಬಿನ್ ಕ್ರಿಷ್ಣ ಮೂರ್ತಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಗೌರಮ್ಮನವರು 2009 ನೇ ಸಾಲಿನಲ್ಲಿ ನೊಂದಾಯಿತವಲ್ಲದ ಮರಣ ಶಾಸನದ ಮೂಲಕ ಎದುರುದಾರ ಬೈರಾ ರೆಡ್ಡಿ ರವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಮೋಸದಿಂದ ವಿಲ್ ಅನ್ನು ಬರೆಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಬೈರಾ ರೆಡ್ಡಿ ರವರು ಮೋಸ ಮಾಡಿಲ್ಲ, ತಾನು ಮರಣ ಹೊಂದುವ ಎಂಟು ದಿನಗಳ ಮೊದಲು ಗೌರಮ್ಮನವರು ಬೈರಾ ರೆಡ್ಡಿಗೆ ವಿಲ್ ಬರೆದುಕೊಟ್ಟು, ವಿಲ್ ಅನ್ನು ಆತನ ಕೈ ಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ತಿಳಿದಿದೆ ಎಂದರೆ ಸರಿಯಲ್ಲ.

3. ಬೈರಾರೆಡ್ಡಿ ರವರು ಬಾಗೇಪಲ್ಲಿ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ: 01/2025 ರಂತೆ ಶಾಶ್ವದ ನಿರ್ಬಂಧಕಾಜ್ಞೆ ಗಾಗಿ ನಮ್ಮಗಳ ವಿರುದ್ದ ದಾವೆ ಹೂಡಿದ್ದಾರೆ ಎಂದರೆ ಸರಿ . ಆ ಕಾರಣದಿಂದ ನಾವು ಈ ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಎದುರುದಾರರಿಗೆ ವಿಲ್ ಬರೆದು ಕೊಟ್ಟಿರುವ ವಿಚಾರ

ಗೊತ್ತಿದ್ದರೂ ಸಹ ಅವರಿಗೆ ತೊಂದರೆ ನೀಡುವ ಸಲುವಾಗಿ ಈ ಪ್ರಕರಣ ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಗೌರಮ್ಮನವರಿಗೆ ಮಕ್ಕಳಿಲ್ಲದ ಕಾರಣ ಆಕೆ ಬೈರಾ ರೆಡ್ಡಿಗೆ ವಿಲ್ ಮೂಲಕ ಆಸ್ತಿಯನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಸದರಿ ಆಸ್ತಿ ನಮಗೆ ಬರಬೇಕು ಎಂದು ನುಡಿದಿರುತ್ತಾರೆ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ/-

**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**